| Deposition Sheets (RP.No.57) Form No.4 | IN THE COURT OF PRL. CIVIL JUDGE & J.M.F.C., KARKALA. <br> Criminal Case No. 539/2024 |
|---|---|

ಸಾಕ್ಷಿದಾರನ ಹೆಸರು ಃ ರಾಜೇಶ್ ದೇವಾಡಿಗ ಪಿ.ಡಬ್ಲ್ಯೂಃ 1

ತಂದೆಯ ಹೆಸರುಃ ವಾಸು ದೇವಾಡಿಗ ಸಿ.ಡಬ್ಲ್ಯೂಃ 1

ಪ್ರಾಯ ಃ 40 ವರ್ಷ

ಉದ್ಯೋಗ ಃ ವೈನ್ ಶಾಪ್ ವ್ಯವಹಾರ

ವಾಸ ಃ ಹಿರಿಯಂಗಡಿ, ಕಾರ್ಕಳ

ದಿನಾಂಕ 20-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಈ ದಿನ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. 2 ನೇ ಆರೋಪಿ ಈ ದಿನ ನ್ಯಾಯಾಲಯದಲ್ಲಿ ಗೈರ ಹಾಜರಿದ್ದು ಅವರನ್ನು ಗುರುತಿಸಲು ಯಾವುದೇ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

ಚಾಸಾ-2 ಮತ್ತು 3 ಪರಿಚಯ ಇದೆ. ಅವರು ನನ್ನ ನೆರೆ ಕೆರೆಯವರು. ಮೃತ ಕುಟ್ಟಿ ದೇವಾಡಿಗ ನನ್ನ ಮಾವ. ಅವರ ಮನೆ ಹಾಗೂ ನನ್ನ ಮನೆ ಅಕ್ಕಪಕ್ಕದಲ್ಲಿದೆ. ದಿಃ 27-11-2023 ರಂದು ಸಂಜೆ 6.15 ಕ್ಕೆ ನಾನು ನನ್ನ ಮನೆಯಲ್ಲಿದ್ದಾಗ ಮೃತ ಕುಟ್ಟಿ ದೇವಾಡಿಗ ಅವರ ಮನೆಯಿಂದ ನಡೆದುಕೊಂಡು ಆನೆಕೆರೆ ಪೇಟೆಗೆ ಹೋಗುತ್ತಿದ್ದರು ಅಂದಾಜು ಸಮಯ 6.15 ಕ್ಕೆ ಬಂಗ್ಲೆಗುಡ್ಡೆ ಜಂಕ್ಷನ್‌ನಿಂದ ಬೈಪಾಸ್ ಜಂಕ್ಷನ್ ಕಡೆಗೆ ಹೋಗುತ್ತಿದ್ದ ದ್ವಿಚಕ್ರ ವಾಹನ ಸವಾರನೊಬ್ಬ ನನ್ನ ಮಾವನಿಗೆ ಡಿಕ್ಕಿ ಪಡಿಸಿರುತ್ತಾರೆ. ಅಪಘಾತ ನಡೆದ ನಂತರ ಚಾಸಾ 2 ನನ್ನ ಮನೆಗೆ ಬಂದು ನಿಮ್ಮ ಮಾವನಿಗೆ ಅಪಘಾತವಾಗಿ ಅವರ ಸ್ಥಿತಿ ಗಂಭೀರ ಇದೆ ಸ್ಥಳಕ್ಕೆ ಬನ್ನಿ ಎಂದು ತಿಳಿಸಿರುತ್ತಾರೆ. ಅದರಂತೆ ನಾನು ಮನೆಯಿಂದ

ಅಪಘಾತ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಸ್ಥಳಕ್ಕೆ ಹೋದಾಗ ನನ್ನ ಮಾವನಿಗೆ ಸಾಕಷ್ಟು ಗಾಯಗಳಾಗಿ ತಲೆ, ಕೈ, ಕಾಲಿಗಳಿಂದ ರಕ್ತ ಬರುತ್ತಿತ್ತು. ನಂತರ ನಾನು ನನ್ನ ಮಾವನನ್ನು ಚಿಕಿತ್ಸೆಗಾಗಿ ಒಂದು ಮಾರುತಿ ಕಾರಿನಲ್ಲಿ ಕಾರ್ಕಳ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಅಲ್ಲಿ ಚಿಕಿತ್ಸೆ ಮಾಡಿದ ವೈದ್ಯರು ಹೆಚ್ಚಿ ನ ಚಿಕಿತ್ಸೆಗಾಗಿ ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋಗಲು ತಿಳಿಸಿರುತ್ತಾರೆ. ನಂತರ ಮರುದಿನ ಚಿಕಿತ್ಸೆ ಫಲಕಾರಿ ಆಗದೇ ವೆನ್‌ಲಾಕ್ ಆಸ್ಪತ್ರೆಯಲ್ಲಿ ನನ್ನ ಮಾವ ಮೃತಪಟ್ಟಿರುತ್ತಾರೆ. ಅಪಘಾತಕ್ಕೆ ದ್ವಿಚಕ್ರ ವಾಹನ ಸವಾರನ ಅತೀವೇಗ ಹಾಗೂ ಅಜಾಗರೂಕ ಚಾಲನೆ ಕಾರಣವಾಗಿರುತ್ತದೆ. ಈ ಕುರಿತು ಪೋಲಿಸ್ ಠಾಣೆಗೆ ದೂರು ನೀಡಿರುತ್ತೇನೆ.

ಸಾಕ್ಷಿಯು ಪಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಪಿರ್ಯಾದಿಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು 1(ಎ) ಎಂದು ಗುರುತಿಸಲಾಯಿತು.

ಅದೇ ದಿನ ಪೋಲಿಸರಿಗೆ ನಾನು ಸ್ಥಳವನ್ನು ತೋರಿಸಿಕೊಟ್ಟಿದ್ದು ಚಾಸಾ 2 ಮತ್ತು 3 ರವರ ಸಮಕ್ಷಮ ಪೋಲಿಸರು ಸ್ಥಳ ಮಹಜರು ಮಾಡಿ, ನಕ್ಷೆ ತಯಾರಿಸಿ, ಭಾವಚಿತ್ರ ತೆಗೆದು, ತಕ್ಷೀರಿಗೆ ಸಂಬಂಧಿಸಿದ ಮೋಟಾರು ಸೈಕಲ್ ನ ಮಡ್‌ಗಡ್ ತುಂಡನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಸ್ಥಳದಲ್ಲಿ ನನ್ನ ಸಹಿ ಪಡೆದುಕೊಂಡಿರುತ್ತಾರೆ.

ಸಾಕ್ಷಿಯು ತಕ್ಷೀರು ಸ್ಥಳ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು 2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನಕ್ಷೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು 3(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ತಕ್ಷೀರು ತನಿಖಾ ಕಾಲದಲ್ಲಿ ತೆಗೆದ ಭಾವಚಿತ್ರಗಳಲ್ಲಿ ತಾವು ಇರುವುದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು.

ಘಟನೆ ಕುರಿತು ಮರುಹೇಳಿಕೆ ನೀಡಿರುತ್ತೇನೆ.

ಸ್ವಾಧೀನಪಡಿಸಿಕೊಂಡ ಸ್ವತನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಬೈಕ್ ನ ಮಡ್‌ಗಡ್ ನೋಡಿ ಗುರುತಿಸಿದ್ದು ಅದನ್ನು ಮು ಮಾ 1 ಎಂದು ಗುರುತಿಸಲಾಯಿತು.

ಸಾಕ್ಷಿಯು ತಕ್ಷೀರಿಗೆ ಸಂಬಂಧಿಸಿದ ದ್ವಿಚಕ್ರ ವಾಹನದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-6 ಮತ್ತು 7 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು</u> : ಆರೋಪಿ ಪರ : ಶ್ರೀ ಎಮ್ ಐ ವಕೀಲರು ಸಮಯವಕಾಶ ಕೋರಿದ್ದು ಖರ್ಚಿನ ಮೇರೆಗೆ ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ

Learned APP filed memo praying to issue s/s to the other witnesses. As the eye witness Pw 1 have completly turned hostile to the case of prosecution. No purpose will be served by issuance of summons to other witnesses. Hence by rejecting the prayer of learned APP evidence of other witnesses are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed. Posted for compliance and Arguments.

Call on 20-02-2024.

Prl. Civil Judge & JMFC.
Karkala

Accused absent. E.P filed and allowed for a day. CW1 to 3 present and examined as PW1 to 3 and

got marked Ex.P1 and 12. and 1(a) to 4(a,. 9(a)

Learned APP filed memo, praying to issue s/s to the CW4 to 17. As the eye witness and victim witness CW1 to 3 have completly turned hostile to the case of prosecution and the parties are relatives and submitted the matter is settled b/w the .Hence no purpose will be served by issuance of summons to CW4 to 17. Who are hearsay witness, mahazar witness and official witness. Hence by rejecting the prayer of learned APP. Evidence of CW4 to 17 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed and posted for

compliance Under 437A and Arguments.

Call on : 17.08.2021

Prl. Civil Judge & JMFC.
Karkala